ಆಗುತ್ತಾರೆ, ಆಫೀಸಿನಲ್ಲಿ ಅವರ ಪೇಪರ್ಸ್ ಎಲ್ಲಾ ಪೆಂಡಿಗ್‌ನಲ್ಲಿ ಇದೆ, ಅದನ್ನು ಸ್ವಲ್ಪ ಕ್ಲಿಯರ್ ಮಾಡಿ.

SRI RAMESH JIGAJINAGI: I will clear Sir.

MR. SPEAKER: Alright, the Hon.Minister has agreed.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸಾರ್ ತಮ್ಮ ಪ್ರಯತ್ನದಿಂದ ಮತ್ತು ನಮ್ಮ ಪ್ರಶ್ನೆಗೆ ಉತ್ತರ ಕೊಡುವಂತಹ ಕಾಲದಲ್ಲಿ ಆ ಪಟೇಲರಿಗೆ ಅವರು ಬದುಕಿದ್ದಾಗಲೇ ಅನುಕೂಲ ಮಾಡಿಕೊಡುತ್ತೇವೆ ಎಂದು ರೆವಿನ್ಯೂ ಮಿನಿಸ್ಟರ್ ಹೇಳಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಪಾಪ ಅವರು ಬದುಕಿದ್ದಾಗಲೇ ಅವರಿಗೆ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ.

ಅಧ್ಯಕ್ಷರು:- ನಿಮ್ಮದು ಹೇಗಿದೆ ನೋಡಿ, ಅವರಿಗೆ ಮಾತ್ರ ಅಭಿನಂದನೆ, ನಮಗಿಲ್ಲ.

ಮಾನ್ಯ ಸದಸ್ಯರು:- ತಮಗೆ ಮೊದಲು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವಿಷಯ: ಸಂಕೇಶ್ವರದಲ್ಲಿ ಬಡಾವಣೆಯನ್ನು ರಚಿಸದಿರುವುದು.

504 (3552)

ಶ್ರೀ ಎ.ಬಿ.ಪಟೇಲ್ (ಸಂಕೇಶ್ವರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಳಗಾಂ ಜಿಲ್ಲೆಯ ಸಂಕೇಶ್ವರದಲ್ಲಿ ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಸುಮಾರು 8 ಎಕರೆ ಪ್ರದೇಶದಲ್ಲಿ ಲೇಔಟ್ ಮಾಡಲು 1994ರಲ್ಲಿ ಕ್ರಮ ತೆಗೆದುಕೊಂಡಿದ್ದು ಈವರೆಗೆ ಇಲ್ಲಿ ಯಾವುದೇ ಲೇಔಟ್ ನಿರ್ಮಾಣವಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ನಿರ್ಮಾಣ ಕಾರ್ಯವು ಪ್ರಸ್ತುತ ಯಾವ ಹಂತದಲ್ಲಿದೆ?

ಇ) ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಬಂದಿದೆ.

ಆ) ಬೆಳಗಾಂ ಜಿಲ್ಲೆ ಸಂಕೇಶ್ವರ ಪಟ್ಟಣದಲ್ಲಿ 9 ಎಕರೆ 2 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದ್ದು ದಿನಾಂಕ: 11-5-93ರಲ್ಲಿ ಸ್ವಾಧೀನಕ್ಕೆ ಪಡೆಯಲಾಗಿದೆ.

ಈ ಜಮೀನಿನಲ್ಲಿ 164 ಮಧ್ಯಮ ಆದಾಯ ವರ್ಗದ ಹಾಗೂ 22 ಹೆಚ್ಚಿನ ಆದಾಯ ವರ್ಗದ ಒಟ್ಟು 186 ಮನೆಗಳನ್ನು ಕಟ್ಟಲು ಉದ್ದೇಶಿಸಲಾಗಿದ್ದು, ಈ ಯೋಜನೆಯ ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ. ಈ ಯೋಜನೆಯ ಅಂದಾಜು ವೆಚ್ಚ ರೂ.442.00 ಲಕ್ಷ ಗಳಾಗಿರುತ್ತದೆ. ಈ ಯೋಜನೆಗೆ ಹಣಕಾಸಿನ ನೆರವನ್ನು ಹುಡ್ಕೋ ಸಂಸ್ಥೆಯಿಂದ ಪಡೆಯಲು ಯೋಜಿಸಲಾಗಿದೆ. ಈ ಕೆಲಸಕ್ಕೆ ಸದ್ಯದಲ್ಲೇ ಟೆಂಡರ್ ಕರೆದು 3 ತಿಂಗಳ ಒಳಗಾಗಿ ಕೆಲಸ ಪ್ರಾರಂಭಿಸಲಾಗುವುದು

ii) ಕೆಲಸ ಪ್ರಾರಂಬಿಸಿದ 18 ತಿಂಗಳ ಒಳಗಾಗಿ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಅಧ್ಯಕ್ಷರು:- ಎ.ಬಿ.ಪಾಟೀಲರೆ, ಈ ಉತ್ತರದಿಂದ ನೀವು ತೃಪ್ತರಾಗಿದ್ದೀರಾ? ಇದಕ್ಕೆ ಉಪ ಪ್ರಶ್ನೆ ಇಲ್ಲವಾ?

ಶ್ರೀ ಎ.ಬಿ.ಪಾಟೀಲ್: ಉಪ ಪ್ರಶ್ನೆ ಇಲ್ಲಾ.

ಅಧ್ಯಕ್ಷರು:- ಶ್ರೀ ರಾಮರೆಡ್ಡಿಯವರೇ, ಸರ್ಕಾರದವರು ನಿಮ್ಮ ಪ್ರಶ್ನೆಗೆ ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಇದಕ್ಕೆ ಸಮಯದ ಅವಶ್ಯಕತೆ ಇಲ್ಲ.

ಅಧ್ಯಕ್ಷರು:- ಆದರೆ ಸರ್ಕಾರದವರು ಸ್ವಲ್ಪ ಸಮಯ ಕೇಳಿದ್ದಾರೆ ಮುಂದಿನ ಸಲ ಅದು ಇದ್ದಾಗ ನಾನು ಹಾಕಿಸಿಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೆ, ಒಂದು ಕೆಲಸ ಮಾಡಿ, ಸರ್ಕಾರದವರು ಹೇಗಿದ್ದರೂ ಸಮಯ ಕೇಳಿದ್ದಾರೆ, ಸಮಯ ಕೊಡಿ, ಅದನ್ನು ನಿಯಮ 69ಕ್ಕೆ ಕನ್ವರ್ಟ್ ಮಾಡಿಕೊಳ್ಳಿ, ಅಥವಾ ಶಾರ್ಟ್ ನೋಟೀಸ್‌ಗೆ ಆದರೂ ಕನ್ವರ್ಟ್ ಮಾಡಿ. ಏಕೆಂದರೆ ಅದು ಅನ್‌ಸ್ಟಾರ್ಡ್ ಆಗಿದೆ.

ಅಧ್ಯಕ್ಷರು: ನೋಡೋಣ, I will look into it. ತಾವು ಇಬ್ಬರೂ ಪುನಃ ನನ್ನ ಛೇಂಬರ್ಸ್‌ಗೆ ಬನ್ನಿ, ಆ ವಿಷಯದ ಬಗ್ಗೆ ಮಾತನಾಡೋಣ We will decide as to how we should take it up.

ವಿಷಯ: ಅರಕಲಗೂಡು ತಾಲ್ಲೂಕಿನಲ್ಲಿ ಜನತಾ ಮನೆಗಳ ನಿರ್ಮಾಣದಲ್ಲಿ ಹಣ ದುರುಪಯೋಗ.

508 (3297)

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಮಾನ್ಯ ವಸತಿ ಸಚಿವರು ಈ ಕೆಳಕಂಡ